ದಿನಾಂಕ : 28-07-2021 ಓ ಎಸ್ ನಂ. 240/2013

ಡಿ. ಡಬ್ಲ್ಯೂ - 5

<u>ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.</u>

<u>ಮುಖ್ಯ ವಿಚಾರಣೆ : ಶ್ರೀ ಕೆ.ಎಸ.ಕೆ 4 ನೇ ಪ್ರತಿವಾದಿ ಪರ ವಕೀಲರಿಂದ</u>

ಈ ದಿನ ನಾನು ನನ್ನ ಸಾಕ್ಷಿ ಪ್ರಮಾಣ ಪತ್ರವನ್ನು ಸಲ್ಲಿಸಿದ್ದು ಅದರಲ್ಲಿ ಬರೆದಿರುವ ಎಲ್ಲಾ ಅಂಶಗಳ ಬಗ್ಗೆ ಮಾಹಿತಿ ಇರುತ್ತದೆ. ಸಾಕ್ಷಿ ಪ್ರಮಾಣ ಪತ್ರವನ್ನು ನಾನೇ ಹೇಳಿ ಬರೆಸಿದ್ದು ಅದನ್ನು ನಾನು ಓದಿ ತಿಳಿದುಕೊಂಡ ನಂತರ ಅದಕ್ಕೆ ಸಹಿ ಮಾಡಿರುತ್ತೇನೆ. ನಾನು ಈ ಕೆಳಕಂಡ ದಾಖಲೆಗಳನ್ನು ಹಾಜರು ಮಾಡುತ್ತಿದ್ದೇನೆ.

ಸಾಕ್ಷಿಯನ್ನು ಡಿಡಬ್ಲೂ-5 ಎಂದು ವಿಚಾರಣೆ ಮಾಡಲಾಯಿತು.

ಸಾಕ್ಷಿಯು ನಿಡಿ-3 ರಲ್ಲಿರುವ ತನ್ನ ಸಹಿ ಹಾಗೂ ಇನ್ನೊಬ್ಬ ಸಾಕ್ಷಿಯ ಸಹಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಡಿ-3(ಎ) ಮತ್ತು 3(ಬಿ)ಎಂದು, ಗುರುತಿಸಲಾಯಿತು.

<u>ಪಾಟೀ ಸವಾಲು : ವಾದಿ ಪರ ವಕೀಲರಿಂದಃ</u>

ನನ್ನನ್ನು ಸಾಕ್ಷಿ ಹೇಳುವುದಕ್ಕೆ ಪ್ರತಿವಾದಿ ನಂ. 4 ಇವರು ಕರೆದುಕೊಂಡು ಬಂದಿರುತ್ತಾರೆ. ದಾವೇದ ಬಗ್ಗೆ ಸ್ವಂತ ಮಾಹಿತಿ ಇಲ್ಲ ಎಂದರೆ ಸರಿ. ಪ್ರತಿವಾದಿ ನಂ. 4 ರವರು ಸಾಕ್ಷಿ ಹೇಳುವುದಕ್ಕೆ ಕರೆದಿರುವುದಿಲ್ಲ ಸಾಕ್ಷಿಯು ಮುಂದುವರೆದು ನನಗೆ ಹಾಗೇಯೆ ಗೊತ್ತಿರುತ್ತದೆ ಎಂದು ನುಡಿಯುತ್ತಾರೆ. ವಾದಿ ಮತ್ತು ಪ್ರತಿವಾದಿ ನಂ. 1 ರಿಂದ 3 ರವರ ಮನೆತನ ಹಾಗೂ ಆಸ್ತಿಯ ಬಗ್ಗೆ ಸ್ವಂತ ಮಾಹಿತಿ ಇಲ್ಲ ಎಂದರೆ ಸರಿ. ನನ್ನ ಸಾಕ್ಷಿ ಪ್ರಮಾಣ ಪತ್ರಕ್ಕೆ ದಾವಾ ಆಸ್ತಿಯ ಬಗ್ಗೆ ವಕೀಲರಿಗೆ ಮಾಹಿತಿ ನೀಡಿಲ್ಲ. ದಾವಾ ಜಮೀನಿನ ಸರ್ವೆ ನಂಬರ ನನಗೆ ನೆನಪಿಲ್ಲ. ಸಾಕ್ಷ ಪ್ರಮಾಣ ಪತ್ರಕ್ಕೆ ಸರ್ವೆ ನಂ. ಏನನ್ನು ಬರೆದಿದ್ದಾರೆ ಎಂದರೆ ಸಾಕ್ಷಿಯು ನನಗೆ ನೆನಪಿಲ್ಲ ಎಂದು ನುಡಿಯುತ್ತಾರೆ. ದಾವಾ ಜಮೀನನ್ನು ನಾನು ನೋಡಿರುತ್ತೇನೆ. ಪೂರ್ವಕ್ಕೆ ರಾಚಯ್ಯ ಚಿಕ್ಕಮಠ ರವರ ಹೊಲ, ಪಶ್ಚಿಮಕ್ಕೆ ಸುಣ್ಣದಕುಂಪಿ ಅವರ ಹೊಲ, ಉತ್ತರಕ್ಕೆ ರಸ್ತೆ, ದಕ್ಷಿಣಕ್ಕೆ ಸುಣ್ಣದಕುಂಪಿ ಅವರ ಹೊಲ. ನಿಡಿ-3 ಕ್ಕೆ ಈ ಮೇಲೆ ಹೇಳಿರುವ ಚಕ್ಕುಬಂದಿಯನ್ನು ಬರೆಸಿದ್ದೀರಾ ಎಂದರೆ ಸಾಕ್ಷಿಯ ಹೌದು ಎಂದು ನುಡಿಯುತ್ತಾರೆ. ಖರೀದಿ ಮಾತುಕತೆ ವ್ಯವಹಾರದ ಬಗ್ಗೆ ಸಂಪೂರ್ಣ ಮಾಹಿತಿ ಇರುತ್ತದೆ. ದಿನಾಂಕಃ 06-01-2017 ರಂದು ಖರೀದಿ ಮಾತುಕತೆಗೆ ಮಿನಿ ವಿಧಾನಸೌಧ ಬೈಲಹೊಂಗಲದಲ್ಲಿ ಕುಳಿತಿದ್ದೇವು. ನಾನು ಮತ್ತು ಇನ್ನೊಬ್ಬ ಸಾಕ್ಷಿದಾರನಾದ ಮೃತ ಬಸವರಾಜ ರಾಮಚಂದ್ರ ಮುಷಪ್ಪನವರ ಕೂಡಿ ಪ್ರತಿವಾದಿ ನಂ. 2 ಮತ್ತು ಆತನ ಹೆಂಡತಿ ಹತ್ತಿರ ಖರೀದಿ ವ್ಯವಹಾರದ ಬಗ್ಗೆ ಮಾತುಕತೆ ಮಾಡಿರುತ್ತೇವೆ. ಪ್ರತಿವಾದಿ ನಂ. 2 ರವರು ನನ್ನ ಬಳಿ ಬಂದು ದಾವಾ ಜಮೀನನ್ನು ಮಾರಿಸಿ ಕೊಡಿ ಎಂದು ಹೇಳಿರುತ್ತಾನೆ. ನಾನು ದಾವಾ ಆಸ್ತಿಯ ದಾಖಲೆಯನ್ನು ನೋಡಿರುತ್ತೇನೆ. ವಾದಿ ಮತ್ತು

2 ನೇ ಪ್ರತಿವಾದಿಯ ಶಿವಪ್ಪನ ಮಕ್ಕಳು ಎಂದರೆ ಸರಿ. 1 ನೇ ಪ್ರತಿವಾದಿಯು ಬಸವಣೆಪ್ಪನ ಮಗನೆಂದರೆ ಸರಿಯಲ್ಲ ಸಾಕ್ಷಿಯು ಮುಂದುವರೆದು ಶಿವಪ್ಪನ ಮಗ ಎಂದು ನುಡಿಯುತ್ತಾರೆ. 1 ಪ್ರತಿವಾದಿಯು ಬಸವಣೆಪ್ಪನ ಮಗ ಇದ್ದರು ಸಹ ಅಲ್ಲ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಬಸವಣೆಪ್ಪನಿಗೆ ಇನ್ನೊಬ್ಬ ಶಿವಬಾಯವ್ವ ಎಂಬ ಮಗಳಿರುತ್ತಾಳೆ ಎಂದರೆ ಸರಿ. ಪ್ರತಿವಾದಿ ನಂ. 2 ರವರಿಗೆ ಪ್ರತಿವಾದಿ ನಂ. 4 ರವರು ಸಂಬಂಧಿಕರಾಗಬೇಕು ಎಂಬ ಬಗ್ಗೆ ನನಗೆ ಮಾಹಿತಿ ಇಲ್ಲ. ದಾವಾವು 2013 ನೇ ಇಸವಿಯಿಂದ ವಾದಿ ಮತ್ತು ಪ್ರತಿವಾದಿಯರ ನಡುವೆ ನಡೆಯುತ್ತಿರುವ ದಾವೆಯ ಬಗ್ಗೆ ನನಗೆ ಮಾಹಿತಿ ಇಲ್ಲ. 2 ನೇ ಪ್ರತಿವಾದಿ ಜೊತೆ ಸೇರಿ ಖೊಟ್ಟಿ ಕಾಗದ ಪತ್ರವನ್ನು ತಯಾರು ಮಾಡಿದ್ದೀರಿ ಎಂದರೆ ಸರಿಯಲ್ಲ. ವಾದಿ ಮತ್ತು 2 ನೇ ಪ್ರತಿವಾದಿಯ ನಡುವೆ ಹಿಸ್ಸೆ ಆಗಿಲ್ಲ ಎಂದರೆ ಸರಿಯಲ್ಲ. ಖರೀದಿ ಮಾತುಕತೆಯ ಸಮಯದಲ್ಲಿ 4 ನೇ ಪ್ರತಿವಾದಿಯು ಸರ್ಕಾರಿ ನೌಕರನಾಗಿದ್ದನು. ಖರೀದಿ ಹಣವನ್ನು 4 ನೇ ಪ್ರತಿವಾದಿಯು ಎಲ್ಲಿಂದ ತಂದಿದ್ದನು ನನಗೆ ಗೊತ್ತಿಲ್ಲ. ಜಮೀನನ್ನು ಖರೀದಿ ಮಾಡಲು 4 ನೇ ಪ್ರತಿವಾದಿಗೆ ಯಾವುದೇ ಮೂಲದಿಂದ ಆದಾಯ ಇರಲಿಲ್ಲ ಎಂದರೆ ಸರಿಯಲ್ಲ, ಖರೀದಿ ದಿನ ಹಣಕಾಸಿನ ವ್ಯವಹಾರ ಆಗಿಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿಯು ವಾದಿಯ ಸ್ವಾಧೀನಲ್ಲಿದೆ ಎಂದರೆ ಸರಿಯಲ್ಲ. 4 ನೇ ಪ್ರತಿವಾದಿಯ ಸ್ನೇಹಿತನಾಗಿರುವ ಕಾರಣ ಸಹಾಯ ಮಾಡಲೆಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ವಾದಿಗು ಸರ್ವೆ ನಂ. 95/02 ರಲ್ಲಿ ಅರ್ಧ ಹಿಸ್ಸೆ ಇದೆ ಎಂದರೆ ಸಾಕ್ಷಿಯು ಅದರ ಬಗ್ಗೆ ನನಗೆ ಮಾಹಿತಿ ಇಲ್ಲ ಎಂದು ನುಡಿಯುತ್ತಾರೆ. ಖರೀದಿ ಕಾಗದ ಪತ್ರವು ಖೊಟ್ಟಿಯಾಗಿರುವ ಕಾರಣ 4 ನೇ ಪ್ರತಿವಾದಿಗೆ ಯಾವುದೇ ಹಕ್ಕಿಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ. ಹೇ. ಕೇ. ಸರಿ ಇದೆ.

ಹೆ ಪ್ರ ದ ನ್ಯಾ ದಂ ನ್ಯಾ ಬೈಲಹೊಂಗಲ